1) *ಬೆಂಗಳೂರಿನಲ್ಲಿರುವ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಪ್ರಧಾನ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು?*

2) *ಈ ಕಛೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲು ಸರ್ಕಾರ ನಿರ್ಧರಿಸಿದೆಯೇ?*

3) *ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

4) *ನೌಕರರುಗಳಿಗೆ ಹುಬ್ಬಳ್ಳಿಯಲ್ಲಿ ಮನೆದೊರಕುವುದು ಕಷ್ಟವೆಂಬದು ಸರ್ಕಾರದ ಗಮನಕ್ಕೆ ಬಂದಿದೆಯೇ?*

5) *ಈ ಕಛೇರಿಯನ್ನು ಸ್ಥಳಾಂತರಿಸುವುದಕ್ಕೆ ಮುಂದೆ ಎಲ್ಲಾ ನೌಕರರುಗಳಿಗೆ ಮನೆಗಳನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?*

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

1) 201.

2) ಸರ್ಕಾರದ ಆದೇಶ ಸಂ:ಸಿಐ:233: ಸಿಟಿಹೆಚ್: ದಿ: 11-9-95ರಲ್ಲಿ ಸ್ಥಳಾಂತರಿಸಲು ತತ್ವಶಃ ಒಪ್ಪಿಗೆ ನೀಡಿದೆ.

3) ಕೈಮಗ್ಗ ಅಭಿವೃದ್ಧಿ ನಿಗಮದ ಅಧೀನದಲ್ಲಿ ಕೆಲಸ ಮಾಡುತ್ತಿರುವ ಕೈಮಗ್ಗ ನೇಕಾರರಲ್ಲಿ ಹೆಚ್ಚಿನ ಸಂಖ್ಯೆಯ ಕೈಮಗ್ಗ ನೇಕಾರರು ಉತ್ತರ ಕರ್ನಾಟಕದಲ್ಲಿ ಇದ್ದಾರೆ. ನಿಗಮದ ಅಧೀನದಲ್ಲಿ ಕೈಮಗ್ಗ ಕ್ಷೇತ್ರದಲ್ಲಿ ಹೆಚ್ಚಿನ ಪಾಲಿನ ಉತ್ಪಾದನೆ ಉತ್ತರ ಕರ್ನಾಟಕದಲ್ಲಿ ನಡೆಯುತ್ತಿದೆ. ನೇಕಾರರ ವೃತ್ತಿ ಕೌಶ್ಯಲ್ಯವನ್ನು ಹೆಚ್ಚಿಸುವಂತಹ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನೇಕಾರರಿಗೆ ಸಾಕಷ್ಟು ಪ್ರಮಾಣದಲ್ಲಿ ನೂಲು ಸರಬರಾಜು ಮಾಡಲು ಅಳವಡಿಸಿಕೊಂಡಿರುವ ಯೋಜನೆಗಳನ್ನು ಸುಗಮನವಾಗಿ ಅನುಷ್ಠಾನಗೊಳಿಸಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲು ನಿರ್ದೇಶಿಸಲಾಗಿದೆ.

4) ಮತ್ತು 5) ಈ.ಬಗ್ಗೆ ಪರಿಶೀಲಿಸಿ ಮುಂದೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

**ಕರ್ನಾಟಕ ಸಾಬೂನು ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವುದರ ಬಗ್ಗೆ**

514 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಸಾಬೂನು ಕಾರ್ಖಾನೆಯನ್ನು (ಕೆಎಸಡಿಎಲ್) ಖಾಸಗಿ ಆಡಳಿತ ಮಂಡಳಿಗೆ ಒಪ್ಪಿಸಲು ಸರ್ಕಾರ ತೀರ್ಮಾನಿಸಿದೆಯೇ?*

ಆ) *ಹಾಗಿದ್ದಲ್ಲಿ, ಆ ಖಾಸಗೀ ಆಡಳಿತ ಮಂಡಲಿಯ ಹೆಸರೇನು ಹಾಗೂ ಅದರ ನಿರ್ದೇಶಕರುಗಳ ವಿವರ ನೀಡುವುದು?*

*ಇ) ಈ ರೀತಿ ಖಾಸಗೀಯವರಿಗೆ ವಹಿಸಿಲಿಚ್ಚಿಸಲು ಕಾರಣಗಳೇನು?*

*ಈ) ಈ ಕಾರ್ಖಾನೆಯು ನಷ್ಟದಲ್ಲಿರುವುದು ನಿಜವೇ? ಹಾಗಿದ್ದಲ್ಲಿ ಕಾರಣವೇನು?*

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

1) ಕೊಬ್ಬರಿನಾಮ್ಲ ಮತ್ತು ಎಣ್ಣೆಯನ್ನು ಬೆಲೆಯ ಹೆಚ್ಚಳದಿಂದ ಉತ್ಪಾದನಾ ವೆಚ್ಚ ಹೆಚ್ಚಾಗಿ ನಷ್ಟಕ್ಕೆ ಕಾರಣವಾಗಿದೆ.

2) ಪ್ಯಾಕಿಂಗ್ ಸಾಮಗ್ರಿಯ ಬೆಲೆಯಲ್ಲಿ ಹೆಚ್ಚಳ.

3) ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಜನವರಿ1992ರಿಂದ ಅನ್ವಯಿಸುವಂತೆ ಹೊಸ ತುಟ್ಟಿ ಭತ್ಯೆ ಸೂತ್ರವನ್ನು ಜಾರಿ ಮಾಡುವಾಗ ದಿನಾಂಕ 1-1-1992 ರಿಂದ ಮನೆ ಬಾಡಿಗೆ ಭತ್ಯೆ ಮತ್ತು ನಗರ ಭತ್ಯೆಯನ್ನು ನೀಡಬೇಕೆಂದು ಕಾರ್ಮಿಕರು ಹೊಸ ಬೇಡಿಕೆಯನ್ನು ಮಾಡಿರುವುದರಿಂದ ಕಾರ್ಮಿಕರು ಮಂದಗತಿಯ ಉತ್ಪಾದನೆ ಮಾಡುತ್ತಿರುವ ಕಾರಣ ಉತ್ಪಾದನೆ ಕುಂಠಿತವಾಗಿದೆ.

**ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭೂಮಿ.**

515 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ದೇವನಹಳ್ಳಿಯ ಬಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ಬೇಕಾಗುವ ಭೂಮಿ ಎಷ್ಟು?*

*ಆ) ಇದರಲ್ಲಿ ಸರ್ಕಾರಿ ಜಮೀನು ಹಾಗೂ ಖಾಸಗೀ ಜಮೀನು ಎಷ್ಟು ಬೇಕಾಗುವುದು?*

*ಇ) ಈ ಜಮೀನುಗಳನ್ನು ಟಾಟಾ ಕಂಪನಿ ನಾಯಕತ್ವದ ಕೂಟಕ್ಕೆ ಸ್ಥಳಾಂತರಿಸಲಾಗುವುದೇ?*

*ಈ) ಹಾಗಿದ್ದಲ್ಲಿ ಈ ಜಮೀನಿಗೆ ನಿಗದಿಪಡಿಸಿರುವ ಬೆಲೆ ಎಷ್ಟು?*

*ಉ) ಈ ಜಮೀನುಗಳನ್ನು ಯಾವಾಗ ಹಸ್ತಾಂತರಿಸಲಾಗುವುದು?*

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ವಿವರವಾದ ಯೋಜನಾ ವರದಿ ಅಂತಿಮಗೊಳಿಸಿದ ನಂತರವೇ ಈ ಯೋಜನೆಗೆ ಎಷ್ಟು ಭೂಮಿ ಬೇಕಾಗುವುದೆಂದು ತಿಳಿದು ಬರುವುದು.